◆ **ನಿಮ್ಮ ಬಾಲ್ಯದ ಪರಿಸರ, ಕುಟುಂಬ ಮತ್ತು ಶೈಕ್ಷಣಿಕ ದಿನಗಳ ನೆನಪುಗಳನ್ನು ಹಂಚಿಕೊಳ್ಳಿ.**

ನಾನು ಹುಟ್ಟಿದ್ದು ಹಳ್ಳಿಯೊಂದರಲ್ಲಿ. ಅದು ನನ್ನ ಅದೃಷ್ಟ ಅಂತಲೇ ಹೇಳಬೇಕು. ಅಲ್ಲಿಯ ಜೀವನಾನುಭವ ವೈವಿಧ್ಯಮಯ. ಮತ್ತದು ಮರೆಯಲಾಗದ ಅನುಭವಗಳನ್ನು ನೀಡಿತು. ಆದರೆ, ನಾನು ದೈಹಿಕ ಶ್ರಮದ ಕೆಲಸ ಮತ್ತು ಹೊಲಗದ್ದೆಗಳ ಕೆಲಸಗಳಲ್ಲಿ ಯಾವಾಗಲೂ ಎಡವಟ್ಟನ್ನೇ ಮಾಡುತ್ತಿದ್ದೆ. ಚಿಕ್ಕ ವಯಸ್ಸಿನಲ್ಲಿ, ನಾನು ಸಾಮಾನ್ಯವಾಗಿ ಪೆನ್ ಮತ್ತು ನೋಟ್ ಬುಕ್ ತೆಗೆದುಕೊಂಡು, ಹೊಲದ ಬದುವಿನ ಗಿಡ ಮರಗಳ ನೆರಳಿನಲ್ಲಿ ಕುಳಿತು ಮನಸ್ಸಿಗೆ ಬಂದಂತೆ ಬರೆಯುತ್ತಿದ್ದೆ. ಇಬ್ಬನಿ ಬಿದ್ದು ಮಿನುಗುವ ಕೆನ್ನೇರಳೆ ಎಲೆಗಳನ್ನು, ನೀಲಗಿರಿ ಮರಗಳ ಸಾಲುಗಳು ಸೂಸುವ ಮತ್ತೇಬ್ಬಿಸುವ ಸುಗಂಧವನ್ನು, ಮಳೆಗಾಲದ ಮಣ್ಣಿನ ಜಾಡಿಯಿಂದ ಮೆಲ್ಲಗೆ ಏಳುತ್ತಿದ್ದ ಮಂಜಿನ ಹೊಗೆಯನ್ನು ನೋಡಿ ಮೋಹಕ್ಕೆ ಬೀಳುತ್ತಿದ್ದೆ. ಆಗ ನಿತ್ಯದ ಜಂಜಾಟಗಳಿಂದ ತುಂಬಿರುವ ಗ್ರಾಮೀಣ ಜನರ ಬದುಕಿನಲ್ಲಿ ಇಂತಹ ಆಲೋಚನೆಗಳು ತೀರಾ ಐಷಾರಾಮಿಯಾಗಿ ಕಾಣುತ್ತಿದ್ದವು. ಇಂತಹ ಸಂದರ್ಭಗಳಲ್ಲಿ ಹಗಲು ಗನಸು ಕಾಣುವ ನಮ್ಮಂಥವರು ಸುಲಭವಾಗಿ ಹೊರಗಿನವರಾಗುವೆವು. ಒಮ್ಮೆ ನಾನು ಚಿಕ್ಕವಳಿದ್ದಾಗ ನನ್ನ ಗೆಳತಿಯ ಮನೆಗೆ ಹೋಗಿದ್ದೆ. ನನಗೀಗಲೂ ನೆನಪಿದೆ. ನನ್ನ ಗೆಳತಿ ತರಕಾರಿಗಳನ್ನು ಕತ್ತರಿಸಿ ಹಂದಿ ಮರಿಗಳಿಗೆ ಹಾಕುತ್ತಿದ್ದಳು. ನಾನು ಅವಳ ಮೇಜಿನ ಮೇಲೆ ಕುಳಿತು ಕನಸುಗಳಲ್ಲಿ ಮುಳುಗಿ ಬರೆಯುತ್ತಿದ್ದೆ. ನನ್ನ ಗೆಳತಿಯ ತಾಯಿ ನಾನು ಮನೆಗೆ ಹೋಗಿದ್ದೇನೆ ಅಂತ ಭಾವಿಸಿ, ಅವಳನ್ನೊಮ್ಮೆ ಹೀಗೆ ಬೈದಳು: 'ನಾಳೆಯಿಂದ, ನೀನು ಆ ಹುಡುಗಿಯ ಜೊತೆ ಸೇರಿ ಆಟವಾಡಬಾರದು! ನಮ್ಮದು ಕೂಲಿ ಮಾಡುವ ಕುಟುಂಬ ಮತ್ತವಳು ಮುದ್ದಿನ ರಾಜಕುಮಾರಿ!' ಪಕ್ಕದ ಕೋಣೆಯಲ್ಲೇ ಇದ್ದ ನನಗೆ, ಆ ಮಾತುಗಳು ಕೇಳಿಸಿದ್ದವು. ನಾನವತ್ತು ಬಿಕ್ಕಿಬಿಕ್ಕಿ ಅತ್ತಿದ್ದೆ.

ಆಗ ನನಗೆ ಗೊತ್ತಾಗಲಿಲ್ಲ, ಈಗ ಅನ್ನುತ್ತೆ: ನಾನು ಸ್ವಲ್ಪ ದುರ್ಬಲ ಮನಸ್ಸಿನವಳಾಗಿದ್ದೆ. ಆ ಸಮಯದಲ್ಲಿ, ದೈಹಿಕ ಶ್ರಮ ಮತ್ತು ಬೌದ್ಧಿಕ ಕೆಲಸ ಎರಡೂ ಸಮಾನವೆಂದು ಹೇಳಲು ನನಗೆ ಹೊಳೆಯಲಿಲ್ಲ. ಕೇವಲ ದೈಹಿಕ ಕೆಲಸ ಮಾತ್ರ ಕಷ್ಟಕರ ಅಂತ ನೀವು ನಂಬಿದ್ರೆ, ಯಾರ ಕೆಲಸ ಬೌದ್ಧಿಕ ಶ್ರಮದ ಆಧಾರದಲ್ಲಿದೆಯೋ ಅವರ ಸ್ಥಾನದಲ್ಲಿ ಒಂದು ಗಂಟೆ ಕಳೆಯಲು ಪ್ರಯತ್ನ ಮಾಡಿ. ನಾನು ಇದನ್ನು ಕಹಿಯಾಗಿ ಅಲ್ಲ, ಆದರೆ, ನಾವು ಒಬ್ಬರ ಸ್ಥಾನ ಮತ್ತು ಸಾಮರ್ಥ್ಯಕ್ಕೆ ಬೆಲೆ ಕೊಡುವುದನ್ನು ಕಲಿಯಬೇಕು ಎಂಬುದಕ್ಕೆ ಹೇಳುತ್ತಿದ್ದೇನೆ.

◆ **ಬಾಲ್ಯದ ತುಂಟಾಟದ ಘಟನೆ ಯಾವುದಾದರೂ ನೆನಪಿದೆಯಾ?**

ಹಳ್ಳಿಯಲ್ಲಿ ಹುಟ್ಟಿದರೂ, ಮಾಧ್ಯಮಿಕ ಶಿಕ್ಷಣದವರೆಗೆ ಪಟ್ಟಣದ ಶಾಲೆಯಲ್ಲಿ ಓದಿದೆ. 'ನಗರ' ಮತ್ತು 'ಹಳ್ಳಿ'ಯ ನಡುವಿನ ವ್ಯತ್ಯಾಸವನ್ನು ನಾನು ಮೊದಲ ಬಾರಿಗೆ ಗುರುತಿಸಿದ್ದು ಅಲ್ಲಿಯೇ. ಜನರು ಸಾಮಾನ್ಯವಾಗಿ ವೈವಿಧ್ಯತೆಯನ್ನು ಒಪ್ಪಿಕೊಳ್ಳುವ ಬದಲು ಹೆಚ್ಚೆಚ್ಚು ಬೇರ್ಪಡಿಸುವ ಗೆರೆಗಳನ್ನು ಎಳೆಯುತ್ತಾರೆ ಅಂತ ನನಗನಿಸುತ್ತದೆ.

ಶಾಲಾ ದಿನಗಳಲ್ಲಿ ನನಗೆ ಬಹಳಷ್ಟು ಬಹುಮಾನಗಳು ಸಿಗುತ್ತಿದ್ದವು. ಎಷ್ಟೇ ಬಹುಮಾನ ಪ್ರಶಸ್ತಿಗಳನ್ನು ಗೆದ್ದರೂ ನಾನು ಏಕಾಂಗಿಯಾಗುತ್ತಾ ಹೋದೆ. ನಾನಾಗ ಆರನೇ ತರಗತಿಯಲ್ಲಿದ್ದೆ. ಅದು ಶಾಲಾಕೊಠಡಿಗಳನ್ನು ಶುಚಿಗೊಳಿಸುವ ಸಮಯ. ನಾನು ನೆಲ, ಗುಡಿಸುತ್ತಿದ್ದಾಗ, ನನ್ನ ಸಹಪಾಠಿ ಹುಡುಗಿಯರ ಒಂದು ಗುಂಪು ತಮ್ಮ ಕಾಲುಗಳನ್ನು ಚಾಚಿ ನನ್ನ ದಾರಿಯನ್ನು ಬಂದ್ ಮಾಡಿತು. ಕಸ ಗುಡಿಸಲು ನನ್ನ ಸಹಪಾಠಿಯೊಬ್ಬಳು ಸಹಾಯ ಮಾಡಲು ಮುಂದಾದಾಗ, ಅವಳನ್ನೂ ಅಡ್ಡಗಟ್ಟಿದ ಆ ಗುಂಪು, 'ಅದನ್ನು ಅವಳಿಗೆ ಬಿಟ್ಟುಬಿಡು. ಅದು ಅವಳ ಕೆಲಸ' ಎಂದು ವ್ಯಂಗ್ಯವಾಡಿತ್ತು. ಆ ಮಾತುಗಳು ಚುರುಕಾದ ಮತ್ತು ನೋಡಲು ಸುಂದರವಾಗಿದ್ದ ಸಿಟಿ ಹುಡುಗಿಯರಿಂದ ಬಂದಿದ್ದವು. ಎಲ್ಲಾ ಸ್ಪರ್ಧೆಗಳಲ್ಲಿ ಬಹುಮಾನಗಳನ್ನು

**ನ್ಯುಯೆನ್ ಥಿ ಥುಯ್ ಲಿನ್ ಅವರ ಸಂದರ್ಶನ**